# ಶುರುವಾಗಿದೆ Lyrics in Kannada

ಮಾತಿನ ಈಟಿಯ ಬೀಸಿ
ಲಾಠಿನು ಕಣ್ಣಲ್ಲೇ ಉರಿಸಿ
ಬೇಟೆಗೆ ಬಂದಳು ರೂಪಸಿ
ಇಕೆಯ ಕೈಯಿಂದ ಉಳಿಸಿ

ಕುಂಚವೇ ಸೋಲುವ ಚೆಂದ
ಕೊಂಚವು ಮೀರದ ಅಂದ
ಸಂಪಿಗೆ ತೀಡಿದ ಗಂದ
ಮೇನಕೆ ಹೆತ್ತಿರೋ ಕಂದ

ಒಲವಿನ ಅಲೆಗಳು ಎದೆಯ ಮೀಟಿ
Bharatlyrics.com
ಹುಡುಗನ ಮನಸೇ ಲೂಟಿ

ಶುರುವಾಗಿದೆ ಸಿಹಿ ಕಂಪನ
ನರ ನಾಡಿಲು ನಿನ್ನ ರಿಂಗಣ

ಮಾತಾಲೆ ಸಕ್ಕರೆ ಪಾಕ
ಕೇಳುತ ಜೀವನ ಮೂಕ
ನಗುವಲಿ ಮೋಹಕ ಶಾಖಾ
ದಾಟಿಸಿ ಸೆಳೆದಳು ಲೋಕ.

ಒಳ ಬೇಗುದಿ ನಿನ್ನದೇ ಸಖಿ
ತುಸು ಕೂತು ಕೇಳು ನೀ ಗೋಳು
ಮನ ದಾಹಕೆ ಹೊಸ ಶಾಯಿರಿ
ಪಿಸು ಮಾತು ಮಾತಲ್ಲೇ ಕೇಳು

ನಡೆದಳು ಅಪ್ಸರೆ ಒಲವಿನ ಗೀಚಿ
ಹುಡುಗನ ಮನಸು ದೋಚಿ

ಶಿಲಾಪಾಲಿಕೆ ಉಸಿರಾಡಿದೆ
ಎದೆ ಮಾಳಿಗೆ ಉಸಿರಾಡಿದೆ

ಎದೆ ಗೂಡಲಿ ನಿನ್ನದೇ ದನಿ
ಗುನುಗುತ್ತಾ ಪ್ರೀತಿಯ ಹಾಡು
ನಡೆದಾಡುವ ಚೆಲುವ ಗಣಿ
ದಯಮಾಡಿ ಈಕಡೆ ನೋಡು

ಕಚಗುಳಿ ಇಡುತಿದೆ ಗೆಜ್ಜೆ ಗಲ್ಲು
ಹೊರಡಿದೆ ಒಲವ ಗುಲ್ಲು

ಶುರುವಾಗಿದೆ ಸಿಹಿ ಕಂಪನ
ನರನಾಡಿಲು ನಿನ್ನ ರಿಂಗಣ.

*More Lyrics from [Sakath]*

BHARAT
lyrics